ಈ ಕೆಲಸಕ್ಕೆ ಪೂರ್ಣ ವಿರಾಮ ಹಾಕುವಂಥ ಕೆಲಸವನ್ನು ನಾನು ಮಾಡುತ್ತೇನೆ.

ಶ್ರೀ ಕೆ.ಶಿವಮೂರ್ತಿ: ಟೆಂಡರ್ system ಇದೆಯಲ್ಲ, ದಯಮಾಡಿ ಹೊರಗಡೆ ಆಂಧ್ರದವರಿಗೆ ಬೇರೆ ಬೇರೆ ರಾಜ್ಯದವರಿಗೆ ಕೊಡುತ್ತಿದ್ದಾರೆ. ನಮಗೆ ಸ್ಥಳೀಯರಿಗೆ ಕೆಲಸ ಮಾಡುವುದಕ್ಕೆ ಅವಕಾಶ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು: ದಯವಿಟ್ಟು ಕೇಳಿ, ಆ ಒಂದು ವ್ಯವಸ್ಥೆಯಾಗಿಬಿಟ್ಟಿದೆ.

ಶ್ರೀ ಕೆ.ಶಿವಮೂರ್ತಿ: ಮಾನ್ಯ ಅಧ್ಯಕ್ಷರೆ, ನನ್ನದೊಂದು submission ಇದೆ. There is a technically difficulty ಬೇರೆ ರಾಜ್ಯದಲ್ಲಿ ಕೋರ್ಟಿಗೆ ಹೋಗಿಬಿಡುತ್ತಾರೆ. ವರ್ಷಗಟ್ಟಲೆಯಾದರೆ, education is an essential service.

(ಗೊಂದಲ)

ಶ್ರೀ ಕೆ.ಶಿವಮೂರ್ತಿ: ಟೆಂಡರ್ process conditions ಅನ್ನು amendment ಮಾಡಲಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಆಯಿತು, amendment ಮಾಡಿ.

ಶ್ರೀ ತಿಮ್ಮರಾಯಪ್ಪ.ಕೆ.ಎಂ.

(2608), ಶ್ರೀ ತಿಮ್ಮರಾಯಪ್ಪ.ಕೆ.ಎಂ. (ಪಾವಗಡ)

ಅ) ಪಾವಗಡ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಆ) ಇದರ ಬಗ್ಗೆ ಉಚ್ಚ ನ್ಯಾಯಾಲಯದ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಯ ವಿಚಾರ ಯಾವ ಹಂತದಲ್ಲಿದೆ;

ಇ) ಶಾಶ್ವತ ಕುಡಿಯುವ ನೀರನ್ನು ಒದಗಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ಹೆಚ್.ಕೆ.ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪಾವಗಡ ತಾಲ್ಲೂಕಿನ ಎಲ್ಲಾ ಜನವಸತಿಗಳಿಗೆ ಶಾಶ್ವತವಾಗಿ ಶುದ್ಧ ನೀರನ್ನು ಸರಬರಾಜು ಮಾಡಲು ಜಲಮೂಲಗಳ ಅನ್ವೇಷಣೆಯನ್ನು ಸಮಾಲೋಚಕರಿಂದ ಮಾಡಿಸಲಾಗಿದೆ. ರಾಜ್ಯ ಮಟ್ಟದ ತಾಂತ್ರಿಕ ಸಮಿತಿ ಸಭೆಯಲ್ಲಿ ಅಂತಿಮವಾಗಿ ತಾಂತ್ರಿಕ ಮತ್ತು ಆರ್ಥಿಕ ಕಾರ್ಯಸಿಂಧುತ್ವವಿರುವ ತುಂಗಭದ್ರಾ ಜಲಾಶಯವನ್ನು ಸೂಕ್ತವಾದ ಜಲಮೂಲವೆಂದು ಪರಿಗಣಿಸಿದೆ. ಆದುದರಿಂದ DBOT ಆಧಾರದಲ್ಲಿ ಚಳ್ಳಕೆರೆ ಮತ್ತು ಮೊಳಕಾಲ್ಮೂರು ತಾಲ್ಲೂಕುಗಳ ಸಮಸ್ಯಾತ್ಮಕ ಜನವಸತಿಗಳನ್ನು ಸಹ ಈ ಪ್ರಾಂತೀಯ ಯೋಜನೆಯಡಿ ಆವರಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ WP No. 32420/2011 (PIL)ನಡಿ ಸಾರ್ವಜನಿಕ ಹಿತಾಸಕ್ತಿ ದಾವೆ ಕುರಿತಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕೈಗೊಂಡಿರುವ ತಾತ್ಕಾಲಿಕ ಪರಿಹಾರ ಕ್ರಮವನ್ನು ಪರಿಶೀಲಿಸಿ, ಸರ್ಕಾರವು ಈಗಾಗಲೇ ಲಿಖಿತ ಮುಚ್ಚಳಿಕೆಯಲ್ಲಿ ಹೇಳಿರುವಂತೆ ನಿಗದಿಪಡಿಸಿದ ಅವಧಿಯಲ್ಲಿ ಶಾಶ್ವತ ಶುದ್ಧ ಕುಡಿಯುವ ನೀರು ಪೂರೈಕೆ ವ್ಯವಸ್ಥೆ ಮಾಡಲು ನ್ಯಾಯಾಲಯ ತಿಳಿಸಿದೆ.

ಇ) 'ಅ' ಭಾಗದ ಪ್ರಶ್ನೆಗೆ ನೀಡಿರುವ ಉತ್ತರದ ಮೇಲೆ ಸರ್ಕಾರದ ಬದ್ಧತೆಯಿದೆ.

ಶ್ರೀ ತಿಮ್ಮರಾಯಪ್ಪ.ಕೆ.ಎಂ.: ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಪಾವಗಡ ತಾಲ್ಲೂಕಿಗೆ ಶಾಶ್ವತ ಕುಡಿಯುವ ನೀರಿನ ಯೋಜನೆ ಅನುಷ್ಠಾನಕ್ಕೆ ಸರ್ಕಾರ ಕೈಗೊಂಡಿರುವ ಕ್ರಮವೇನು ಎಂದು ನಾನು ಪ್ರಶ್ನೆ ಕೇಳಿದ್ದರೆ, ತಾಂತ್ರಿಕ ಸಮಿತಿಯಿಂದ ಈಗಾಗಲೇ ಪರಿಶೀಲನೆ ಮಾಡಿಸಿದ್ದೇವೆ. ಯೋಜನೆಯನ್ನು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಏನು ಉತ್ತರ ಕೊಟ್ಟಿದ್ದಾರೆ ಈಗಾಗಲೇ ಈ ವಿಚಾರ ತುಂಬಾ ಗಂಭೀರವಾಗಿದೆ. ನಮ್ಮ ಭಾಗದ ವಿಚಾರವನ್ನು ಇಲಾಖೆಯ ಬೇಡಿಕೆ ಮೇಲೆ ಚರ್ಚೆ ಬಂದಿದ್ದಾಗ ನಾನು ಚರ್ಚೆಯನ್ನು ಸಹ ಮಾಡಿದ್ದೇನೆ. ಅದಕ್ಕಾಗಿ ತ್ವರಿತವಾಗಿ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕು ಮತ್ತು ಆ ಭಾಗದ 1.5 pp ಯಿಂದ 3.5 pp ವರೆಗೂ ಅಲ್ಲಿರುವಂಥ ಜನ ಫ್ಲೋರೈಡ್ ಅಂಶವಿರುವಂಥ ನೀರನ್ನು ಕುಡಿಯುತ್ತಿದ್ದಾರೆ, ಅದು ಆರೋಗ್ಯಕ್ಕೆ ಹಾನಿಕರವೆಂದು ಈಗಾಗಲೇ ತಜ್ಞರು ಮತ್ತು ವೈದ್ಯಾಧಿಕಾರಿಗಳು ದೃಢೀಕರಣವನ್ನು ಕೊಟ್ಟಿದ್ದಾರೆ. ಅದಕ್ಕೆ ಆ ಭಾಗದಲ್ಲಿ ತುಂಬಾ ಜನರಿಗೆ ಸಮಸ್ಯೆಯಾಗುತ್ತಿದೆ, ಆರೋಗ್ಯ ಹದಗೆಡುತ್ತಿದೆ. ಅದಕ್ಕಾಗಿ ತಾವು ತ್ವರಿತವಾಗಿ ಆಡಳಿತಾತ್ಮಕ ಅನುಮೋದನೆಯನ್ನು ಕೊಟ್ಟು ನಮ್ಮ ಭಾಗದ ಜನರಿಗೆ ಶಾಶ್ವತ ಕುಡಿಯುವ ನೀರನ್ನು ಕೊಡಬೇಕೆಂದು ನಿಮ್ಮಲ್ಲಿ ಮತ್ತೊಂದು ಬಾರಿ ನಾನು ಮನವಿ ಮಾಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾನು ಸಂಪೂರ್ಣ ವಿವರಗಳನ್ನು ಕೊಟ್ಟಿದ್ದೇನೆ. ಆದರೆ, ಅವರಿಗೆ ಗೊತ್ತಿರುವಂತೆ ಹಾಗೂ ತಮಗೂ ಪಾವಗಡದ ಬಗ್ಗೆ ಹೆಚ್ಚಿನ ಮಾಹಿತಿಯಿರುವಂತೆ ನಮ್ಮ ಕರ್ನಾಟಕಲ್ಲಿ ಅತ್ಯಂತ ಹೆಚ್ಚು ಕಲುಷಿತವಾಗಿರುವಂಥ ನೀರು ಇರುವುದೇ ಪಾವಗಡದಲ್ಲಿ. ಫ್ಲೋರೈಡ್ ಅಂಶ ಎಷ್ಟು ಹೆಚ್ಚಾಗಿದೆಯೆಂದರೆ 158 ಗ್ರಾಮಗಳು fluoride ನಿಂದ effect ಆಗಿವೆ. ಕಬ್ಬಿಣ ಅಂಶವೂ ಹೆಚ್ಚಾಗಿದೆ. ನಾನು ಹೆಚ್ಚಿನ ವಿವರಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು: ಅದೆಲ್ಲಾ ವಿವರಗಳು ಈಗ ಬೇಡ. ಈ ಯೋಜನೆಯನ್ನು ಯಾವಾಗ ಅನುಷ್ಠಾನ ಮಾಡುತ್ತೀರಿ ಎಂದು ಹೇಳಿ.

ಶ್ರೀ ಹೆಚ್.ಕೆ.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಬಂದ ಮೇಲೆ ಈಗಾಗಲೇ ಅವರಿಗೆ 157 ಶುದ್ಧ ನೀರಿನ ಘಟಕಗಳನ್ನು ಸ್ಥಾಪನೆ ಮಾಡುವುದಕ್ಕೆ ನಿರ್ಣಯ ತೆಗೆದುಕೊಂಡಿದ್ದೇವೆ. ಅದರಲ್ಲಿ 100 ಕ್ಕಿಂತ ಹೆಚ್ಚು ಘಟಕಗಳು ಈಗಾಗಲೇ ಪೂರ್ಣಗೊಳ್ಳುವ ಹಂತಕ್ಕೆ ಬಂದಿವೆ. ಇದು ತಾತ್ಪೂರ್ತಿಕ. ಶಾಶ್ವತವಾಗಿ ತುಂಗಭದ್ರಾ ಜಲಾಶಯದ ಹಿನ್ನೀರಿನಿಂದ ಪಾವಗಡಕ್ಕೆ ನೀರನ್ನು ತೆಗೆದುಕೊಂಡು ಬರಬೇಕಾಗುತ್ತದೆ. ಆ ಹಿನ್ನೆಲೆಯೊಳಗೆ ನಾವು 670 ಗ್ರಾಮಗಳನ್ನು cover ಮಾಡಿ enroute ಯೋಜನೆಯನ್ನು ಮಾಡಬೇಕೆಂದು ಚಿಂತನೆ ಮಾಡುತ್ತಿದ್ದೇವೆ. ಈಗಾಗಲೇ ತಾಂತ್ರಿಕ ಸಮಿತಿಗಳಿಂದ ಇದಕ್ಕೆ clearance ಪಡೆದುಕೊಂಡಿದ್ದೇವೆ. DBOT ಕೆಳಗೆ ತೆಗೆದುಕೊಳ್ಳುವುದಕ್ಕೆ Cabinet ಗೆ ಬಹಳ ಬೇಗ ನಾನು ವಿಷಯವನ್ನು ತೆಗೆದುಕೊಂಡು ಹೋಗುತ್ತೇನೆ.

ಅಧ್ಯಕ್ಷರು: ಆಯಿತು. ಸುನೀಲ್ ಕುಮಾರ್ ನಿಮ್ಮ ಪ್ರಶ್ನೆಯನ್ನು ಮುಜರಾಯಿ ಇಲಾಖೆಗೆ ಕಳುಹಿಸಿದ್ದು, ಉತ್ತರ ಮುಂದಿನ ವಾರ ಬರುತ್ತದೆ. ಈಗ ಡಾ: ಎ.ಬಿ.ಮಾಲಕರೆಡ್ಡಿ ರವರ ಪ್ರಶ್ನೆ.

(1724), ಡಾ: ಮಾಲಕರೆಡ್ಡಿ ಎ.ಬಿ. (ಯಾದಗಿರಿ)

ಅ) ಯಾದಗಿರಿ ವಿಧಾನ ಸಭಾ ಕ್ಷೇತ್ರದ ಎಲ್ಲಾ ಗ್ರಾಮೀಣ ಸಂಪರ್ಕ ರಸ್ತೆಗಳು ತೀರಾ ಹದಗೆಟ್ಟು ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಗಳ ಅಭಿವೃದ್ಧಿಗೆ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು;

ಇ) ಈ ರಸ್ತೆಗಳಲ್ಲಿ ಸಾರ್ವಜನಿಕರು, ದನಕರುಗಳು, ವಾಹನಗಳು, ಎತ್ತಿನಬಂಡಿಗಳು ಸಂಚರಿಸಲು ಸಾಧ್ಯವಾಗದೇ, ಸಾರ್ವಜನಿಕರಿಂದ ಬೃಹತ್ ಪ್ರತಿಭಟನೆಗಳು ವ್ಯಕ್ತವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;